# ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

1951ರ ರಾಜ್ಯ ಹಣಕಾಸು ಸಂಸ್ಥೆಗಳ ಕಾಯಿದೆ ಅನ್ವಯ ಸ್ಥಾಪಿತ

# KARNATAKA STATE FINANCIAL CORPORATION

Established under the State Financial Corporations' Act, 1951

ಸಂಖ್ಯೆ : ಕ.ರಾ.ಹ.ಸಂ./ಪ್ರ.ಕ./ ಔ-752/2021-22
Ref. No. KSFC/H.O./

ದಿನಾಂಕ : 16/12/2021

**ಸುತ್ತೋಲೆ** - 1020

ವಿಷಯ: ಸಂಸ್ಥೆಯ ಮಹಿಳಾ ನೌಕರರಿಗೆ ಶಿಶುಪಾಲನಾ ರಜೆ ಮಂಜೂರು ಮಾಡುವ ಕುರಿತು.

ಉಲ್ಲೇಖ:1. ಸರ್ಕಾರಿ ಆದೇಶ ಸಂಖ್ಯೆ. ಆಇ 1 ಸೇನಿಸೇ 2011 ದಿ: 29.06.2021.
2.ಸರ್ಕಾರಿ ಆದೇಶ ಸಂಖ್ಯೆ. ಆಇ 4(ಇ) ಸೇನಿಸೇ 2021 ದಿ: 21.06.2021.

----------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-1ರ ಸರ್ಕಾರಿ ಆದೇಶದನ್ವಯ ಬುದ್ಧಿಮಾಂದ್ಯ/ಅಂಗವಿಕಲ ಮಕ್ಕಳನ್ನು ನೋಡಿಕೊಳ್ಳಲು ಸಂಸ್ಥೆಯ ಮಹಿಳಾ ನೌಕರರಿಗೆ ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರದ ಆಧಾರದ ಮೇಲೆ ಕೆಲವು ಷರತ್ತಗೊಳಪಟ್ಟು ಒಂದು ವರ್ಷದಲ್ಲಿ ಮೂರು ಕಂತುಗಳಿಗೆ ಮೀರದಂತೆ ಹಾಗೂ 15 ದಿನಗಳಿಗೆ ಕಡಿಮೆ ಇಲ್ಲದಂತೆ ಇಡೀ ಸೇವಾವಧಿಯಲ್ಲಿ ಎರಡು ವರ್ಷಗಳ ಅವಧಿಗೆ ಅಂದರೆ 730 ದಿನಗಳ ಶಿಶುಪಾಲನಾ ರಜೆಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. ಈ ಆದೇಶದನ್ವಯ ಸಂಸ್ಥೆಯ ಮಹಿಳಾ ನೌಕರರಿಗೂ ಸಹ ಸದರಿ ಸೌಲಭ್ಯವನ್ನು ಜಾರಿಗೊಳಸಲಾಗಿರುತ್ತದೆ.

ಉಲ್ಲೇಖ-2ರ ಸರ್ಕಾರಿ ಆದೇಶದನ್ವಯ ಮಹಿಳಾ ನೌಕರರಿಗೆ ಚಾಲ್ತಿಯಲ್ಲಿರುವ ಪ್ರಸೂತಿ ರಜೆಯೊಂದಿಗೆ ಒಟ್ಟು ಸೇವಾವಧಿಯಲ್ಲಿ ಆರು ತಿಂಗಳವರೆಗೆ ಅಂದರೆ 180 ದಿನಗಳ ಶಿಶುಪಾಲನಾ ರಜೆಯನ್ನು ಘೋಷಿಸಿರುತ್ತದೆ, ಈ ಆದೇಶದಂತೆ ಸಂಸ್ಥೆಯ ಉದ್ಯೋಗಿಗಳಿಗೂ ಸಹ 180 ದಿನಗಳ ಶಿಶುಪಾಲನಾ ರಜೆಯನ್ನು ಮಂಜೂರು ಮಾಡಲು ದಿನಾಂಕ 10.12.2021 ರಂದು ನಡೆದ ಸಂಸ್ಥೆಯ ನಿರ್ದೇಶಕ ಮಂಡಳಿ ಸಭೆ ಅನುಮೋದಿಸಿರುತ್ತದೆ. ಷರತ್ತುಗಳು ಈ ಕೆಳಕಂಡಂತ್ತಿರುತ್ತದೆ.

i) ಮಹಿಳಾ ಸರ್ಕಾರಿ ನೌಕರಳು ಹೊಂದಿರುವ ಮಕ್ಕಳ ಸಂಖ್ಯೆಯನ್ನು ಪರಿಗಣಿಸದೆ, ಅತ್ಯಂತ ಕಿರಿಯ ಮಗುವು 18 ವರ್ಷ ತಲುಪುವವರೆಗಿನ ಅವಧಿಗೆ ಮಾತ್ರ ಈ ರಜೆಯ ಸೌಲಭ್ಯಕ್ಕೆ ಅರ್ಹರಾಗತಕ್ಕದ್ದು.

ii) ಈ ರಜೆಯ ಅವಧಿಯಲ್ಲಿ ನೌಕರಳು ರಜೆಯ ಮೇಲೆ ಹೋಗುವ ನಿಕಟ ಪೂರ್ವದಲ್ಲಿ ಪಡೆಯಲರ್ಹವಿರುವ ಸಂಪೂರ್ಣ ವೇತನಕ್ಕೆ ಸಮನಾದ ರಜೆ ಸಂಬಳಕ್ಕೆ ಅರ್ಹರಾಗತಕ್ಕದ್ದು.

iii) ಪ್ರತಿ ಬಾರಿಯ ಈ ರಜೆ ಮಂಜೂರಾತಿಯು ಕನಿಷ್ಠ 15 ದಿನಗಳಗಿಂತ ಕಡಿಮೆ ಇರಬಾರದು.

iv) ಮಹಿಳಾ ಸರ್ಕಾರಿ ನೌಕರಳು ಈ ರಜೆಯನ್ನು ಸಾಂದರ್ಭಿಕ ರಜೆಯ ಹೊರತಾಗಿ, ನಿಯಮನುಸಾರ ಪಡೆಯಲರ್ಹವಿರುವ ಅಸಾಧಾರಣ ರಜೆಯೂ ಒಳಗೊಂಡಂತೆ ಇತರೆ ರಜೆಯೊಂದಿಗೆ ಸಂಯೋಜಿಸಿ ಪಡೆಯಬಹುದು.

v) ಈ ರಜೆಯನ್ನು ಯಾವುದೇ ರಜೆ ಲೆಕ್ಕದಿಂದ ಕಳೆಯತಕ್ಕದ್ದಲ್ಲ. ಉಪಯೋಗಿಸಿಕೊಳ್ಳದ ಈ ಸೌಲಭ್ಯದ ಸಂಬಂಧದಲ್ಲಿನ ರಜೆಯನ್ನು ಗಳಿಕೆ ರಜೆ ಲೆಕ್ಕಕ್ಕೆ ಜಮೆಗೊಳಸಲು/ನಗದೀಕರಿಸಲು ಅವಕಾಶವಿರುವುದಿಲ್ಲ.

ಮುಂದುವರಿದಿದೆ...

ಪ್ರಧಾನ ಕಛೇರಿ : ಕೆ.ಎಸ್.ಎಫ್.ಸಿ. ಭವನ, ನಂ. 1/1, ತಿಮ್ಮಯ್ಯ ರಸ್ತೆ, ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು – 560 052.
ದೂರವಾಣಿ ಸಂಖ್ಯೆ ಸಾಮಾನ್ಯ : 080-22263322 ಇ-ಮೇಲ್ : info@ksfc.in ವೆಬ್ : https://ksfc.karnataka.gov.in
HEAD OFFICE : K.S.F.C. Bhavan, # 1/1, Thimmaiah Road, Near Contonment Railway Station, Bengaluru - 560 052.
Telephone : Gen : 22263322 e-mail : infor@ksfc.in, Webside : https://ksfc.karnataka.gov.in

Continuation Sheet No.



vi) ಬುದ್ಧಿಮಾಂದ್ಯ/ಅಂಗವಿಕಲ ಮಕ್ಕಳನ್ನು ಹೊಂದಿರುವ ಸಂಸ್ಥೆಯ ಮಹಿಳಾ ನೌಕರರು 730 ದಿನಗಳ ಶಿಶುಪಾಲನಾ ರಜೆ ಸೌಲಭ್ಯವನ್ನು ಉಪಯೋಗಿಸಿಕೊಂಡಿದ್ದರೆ ಅಥವಾ ಪಡೆಯುತ್ತಿದ್ದರೆ ಈ ಯೋಜನೆಯಡಿಯಲ್ಲಿನ ಸೌಲಭ್ಯಕ್ಕೆ ಅರ್ಹರಾಗುವುದಿಲ್ಲ.

vii) ಶಿಶುಪಾಲನಾ ರಜೆಯ ಮಂಜೂರಾತಿಗಾಗಿ ಯಾವುದೇ ಪೂರಕ ದಾಖಲೆಗಳನ್ನು ಪಡೆಯುವ ಅವಶ್ಯಕತೆಯಿರುವುದಿಲ್ಲ. ಸೇವಾ ಪುಸ್ತಕದಲ್ಲಿ ನಮೂದಿಸಿರುವ ಮಕ್ಕಳ ವಿವರಗಳ ಆಧಾರದ ಮೇಲೆ ಮಂಜೂರು ಮಾಡತಕ್ಕದ್ದು.

viii) ಈ ಪೂರ್ವದಲ್ಲಿ ಮಂಜೂರಾಗಿರುವ ಯಾವುದೇ ಬಗೆಯ ರಜೆಯನ್ನು ಶಿಶುಪಾಲನಾ ರಜೆಯಾಗಿ ಪರಿವರ್ತಿಸತಕ್ಕದ್ದಲ್ಲ. ಈ ಆದೇಶದಡಿಯಲ್ಲಿನ ಸೌಲಭ್ಯವು ಆದೇಶವನ್ನು ಹೊರಡಿಸಿದ ದಿನಾಂಕದಿಂದ ಜಾರಿಗೊಳ್ಳತಕ್ಕದ್ದು.

ix) ಈ ರಜೆಯನ್ನು ಪ್ರಧಾನ ಕಛೇರಿಯಿಂದ ಮಂಜೂರಾತಿ ಪಡೆದು ನೀಡತಕ್ಕದ್ದು ಹಾಗೂ ಈ ರಜೆ ವಿವರಗಳನ್ನು ಪ್ರತಿ ತಿಂಗಳು ಹಾಜರಾತಿ ವರದಿಯಲ್ಲಿ ಪ್ರತ್ಯೇಕವಾಗಿ ನಮೂದಿಸತಕ್ಕದ್ದು. ಈ ರಜೆ ಖಾತೆಯನ್ನು ಪ್ರಧಾನ ಕಛೇರಿಯಿಂದಲೇ ನಿರ್ವಹಿಸಲಾಗುವುದು.

ಈ ಮೇಲಿನ ಆದೇಶದಲ್ಲಿ ವಿಧಿಸಿರುವ ಷರತ್ತುಗೊಳಪಟ್ಟು ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಮಹಿಳಾ ಉದ್ಯೋಗಿಗಳು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬಹುದಾಗಿರುತ್ತದೆ. ಈ ಸುತ್ತೋಲೆಯನ್ನು ಸಂಸ್ಥೆಯ ಎಲ್ಲಾ ಮಹಿಳಾ ಉದ್ಯೋಗಿಗಳ ಗಮನಕ್ಕೆ ತರಲು ಸೂಚಿಸಲಾಗಿದೆ.

Elroop Caur 16/12
ವ್ಯವಸ್ಥಾಪಕ ನಿರ್ದೇಶಕರು

ಪ್ರಧಾನ ಕಛೇರಿಯ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳಿಗೆ
ಎಲ್ಲಾ ಶಾಖಾ ಕಛೇರಿಗಳ ಮುಖ್ಯಸ್ಥರುಗಳಿಗೆ,
ಆ.ಲೆ.ಪ ಕೋಶ, ಮೈಸೂರು, ಧಾರವಾಡ, ಗುಲ್ಬರ್ಗಾ ಮತ್ತು ಬೆಂಗಳೂರು.
ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ
ಕಾರ್ಯ ನಿರ್ವಾಹಕ ನಿರ್ದೇಶಕರು-1 ಮತ್ತು 2 ರವರುಗಳಿಗೆ
ವ್ಯ.ನಿ. ರವರ ಕಛೇರಿಗೆ } ಮಾಹಿತಿಗಾಗಿ.
ಅಧ್ಯಕ್ಷರು, ಕರಾಹಸಂ ನೌಕರರ/ಅಧಿಕಾರಿಗಳ/ಪ.ಜಾ & ಪ.ಪಂ ನೌಕರರ ಸಂಘ,
ಗ್ರಂಥಾಲಯ / ಸೂಚನಾ ಫಲಕಕ್ಕೆ
ಕಛೇರಿ ಪ್ರತಿ